## ಮದುವೆಗೆ ಪರಿಸರ ತಂದ ಶೋಭೆ

‘ನೂರು ಜನ್ಮಕೂ’ ಧಾರಾವಾಹಿಯ ನಾಯಕ ಚಿರಂಜೀವಿ ಹಾಗೂ ಮೈತ್ರಿಯ ವಿವಾಹವನ್ನು ಬೆಟ್ಟಗುಡ್ಡಗಳ ಪರಿಸರದಲ್ಲಿ ಏರ್ಪಡಿಸಲಾಗಿತ್ತು. ಉಳ್ಳವರು ಇಂದಿನ ದಿನಮಾನದಲ್ಲಿ ಆಕರ್ಷಕ ವಿವಾಹ ಮಂಟಪದಲ್ಲಿ ಅದ್ದೂರಿಯಾಗಿ ಮದುವೆ ಮಾಡಲು ಹಣವನ್ನು ವ್ಯಯಿಸುತ್ತಾರೆ. ಅದರ ಬದಲು ‘ನೂರು ಜನ್ಮಕೂ’ ಧಾರಾವಾಹಿಯಂತೆ ನೀಲಿ ಆಕಾಶದ ಅಡಿಯಲ್ಲಿ... ಬೆಟ್ಟಗುಡ್ಡಗಳ ಪರಿಸರದಲ್ಲಿ ಮಾಡುವುದು ಖುಷಿ ಕೊಡುವಂತಿತ್ತು. ಈ ಹಿಂದೆ ನಮ್ಮ ಹಿರಿಯರು ಮನೆ ಅಂಗಳದಲ್ಲಿ ತಮ್ಮ ಮಕ್ಕಳ ವಿವಾಹ ಮಾಡುವ ಪದ್ಧತಿ ಇತ್ತು. ಈಗ ತಮ್ಮ ಜೀವನಪೂರ್ತಿ ದುಡಿದ ಹಣದಿಂದ ನಗರ ಪಟ್ಟಣಗಳಲ್ಲಿನ ಕಲ್ಯಾಣ ಮಂಟಪದಲ್ಲಿ ಮದುವೆ ಮಾಡುತ್ತಿದ್ದಾರೆ. ನಮ್ಮ ಸುತ್ತಲಿನ ಪರಿಸರದಲ್ಲಿ ವಿವಾಹ ಮಾಡುವ ಜೊತೆಗೆ ಅಳಿವಿನ ಅಂಚಿನಲ್ಲಿ ಇರುವ ವಾದ್ಯ, ಕರಡಿ ಮಜಲು, ಡೊಳ್ಳು ಕುಣಿತದಂತಹ ಕಲಾಪ್ರಕಾರಕ್ಕೂ ಪುನರುಜ್ಜೀವನ ನೀಡಬಹುದು.

—ಅನುರಾಧ ಟಿ., ದಾವಣಗೆರೆ

## ಕ್ರಿಸ್‌ಮಸ್‌ಗೆ ಲೂಯಿಸ್ ಪಟಾಕಿ

ಚಂದನದ ‘ಥಟ್ ಅಂತ ಹೇಳಿ’ ಕಾರ್ಯಕ್ರಮದಲ್ಲಿ ಕ್ರಿಸ್‌ಮಸ್ ಪ್ರಯುಕ್ತ ರಂಗಕರ್ಮಿ, ಹಾಸ್ಯ ಕಲಾವಿದ ರಿಚರ್ಡ್ ಲೂಯಿಸ್ ಅವರ ಸಂದರ್ಶನವನ್ನು ನಾ. ಸೋಮೇಶ್ವರ ಅರ್ಥಪೂರ್ಣವಾಗಿ ನಡೆಸಿಕೊಟ್ಟರು. ರಿಚರ್ಡ್ ಅವರ ಬಾಲ್ಯ, ರಂಗಭೂಮಿಯ ಒಡನಾಟದ ಜೊತೆ ‘ಕನ್ನಡ ಸಾಹಿತ್ಯ ಕಲಾ ಸಂಘ’ದ ಚಟುವಟಿಕೆಗೆ ಸಂಬಂಧಿಸಿದಂತೆ ಸ್ವಾರಸ್ಯಕರವಾಗಿ ಚರ್ಚಿಸಿದರು. ಇದರ ಜೊತೆ ಕ್ರಿಸ್‌ಮಸ್ ವಿಶೇಷ ಮತ್ತು ಕ್ರೈಸ್ತ ಧರ್ಮದ ಬಗ್ಗೆ ವಿವರಣೆಯ ಚಂದದ ಮಾತುಕತೆಯನ್ನು ನಡೆಸಿಕೊಟ್ಟರು.

—ಭಾರತೀ ಗಂಗಾಧರ್, ಬೆಂಗಳೂರು

## ಮಾಜಿ ಮುಖ್ಯಮಂತ್ರಿ ಸತ್ತು ಹೋದ್ರಂತೆ!

ಝೀ ಕನ್ನಡದ ‘ಅಮೃತಧಾರೆ’ಯ ಒಂದು ಸಂಚಿಕೆಯ ಸಂದರ್ಭ: ಪುಟ್ಟಿ ಆ ದಿನ ಸ್ಕೂಲಿನಿಂದ ಬೇಗ ಬಂದಿರುತ್ತಾಳೆ. ಭೂಮಿಕಾ ಅವಳನ್ನು ಮನೆಗೆ ಬಿಟ್ಟು ಬರಲು ಹೊರಡುವಷ್ಟರಲ್ಲಿ ಗೌತಮ್ ಸಹ ಆಫೀಸಿನಿಂದ ಮನೆಗೆ ಬರುತ್ತಾನೆ. ಆತನನ್ನು ವಿಚಾರಿಸುವ ಭೂಮಿಕಾ ‘...ಮಾಜಿ ಮುಖ್ಯಮಂತ್ರಿಯವ್ರು ಸತ್ಹೋದ್ರಂತ ನೀವೂ ಆಫೀಸಿಗೆ ರಜಾ ಹಾಕಿ ಬಂದ್ರಾ’ ಎಂದು ಆಶ್ಚರ್ಯ ವ್ಯಕ್ತಪಡಿಸುತ್ತಾಳೆ. ನಿರ್ದೇಶಕರು ಸಾಂದರ್ಭಿಕವಾಗಿ ಈ ವಿಷಯವನ್ನು ತಂದಿರಬಹುದು. ಆದರೆ, ರಾಜ್ಯದ ಮುಖ್ಯಮಂತ್ರಿಯಾಗಿದ್ದ ಮತ್ತು ಕೇಂದ್ರದಲ್ಲಿ ಹಲವು ಪ್ರಮುಖ ಹುದ್ದೆಗಳನ್ನು ನಿರ್ವಹಿಸಿದ ಎಸ್.ಎಂ. ಕೃಷ್ಣ ಇತ್ತೀಚೆಗಷ್ಟೇ ನಿಧನರಾಗಿದ್ದರು. ಇಂತಹ ವಿಷಾದದ ಸಮಯದಲ್ಲಿ ಈ ರೀತಿಯ ಸಂಭಾಷಣೆ ಅನುಚಿತ. ಪದಪ್ರಯೋಗ ಎಷ್ಟು ಗೌರವಯುತವಾದದ್ದು ಎಂಬುದನ್ನು ಸಂಭಾಷಣಾಕಾರರು ಯೋಚಿಸಬೇಕಿತ್ತು!

—ಆಕರ್ಷನ್, ಮೂಡುಬಿದಿರೆ

ವಾರದ ಪತ್ರ

## ಪಾದಪೂಜೆ: ಅನುಕರಣೀಯ ನಡೆ

ಮದುವೆ ಎಂಬುದು ಕೇವಲ ಗಂಡು–ಹೆಣ್ಣುಗಳ ಬಂಧನವಲ್ಲ. ಎರಡು ಕುಟುಂಬಗಳ ಸಂಬಂಧದ ಬೆಸುಗೆ ಎಂದು ಹಿರಿಯರು ಹೇಳುತ್ತಾರೆ. ಅಂತಹ ಮಹತ್ವದ ಮದುವೆಯಲ್ಲಿ ಹಲವು ಸಂಪ್ರದಾಯಗಳೂ ಇರುತ್ತವೆ. ಅವುಗಳಲ್ಲಿ ನಾಂದಿ, ಛತ್ರಪೂಜೆ, ಬಳೆ ಶಾಸ್ತ್ರ, ಅರಿಶಿನ ಶಾಸ್ತ್ರ, ವರಪೂಜೆ ಇತ್ಯಾದಿ.

ಕಲರ್ಸ್ ಕನ್ನಡದ ‘ನೂರು ಜನ್ಮಕೂ’ ಧಾರಾವಾಹಿಯಲ್ಲಿಯೂ ಮದುವೆ ಪ್ರಸಂಗ ನೋಡಿದೆ. ಕದಂಬ ಮನೆತನದ ಹಿರಿಯ ಜೀವ ಜಯಮ್ಮ ತನ್ನ ಮೊಮ್ಮಗ ಚಿರಂಜೀವಿಗೆ, ತಮ್ಮ ನೌಕರನ ಮಗಳಾದ ಮೈತ್ರಿಯನ್ನು ತಂದುಕೊಳ್ಳುತ್ತಿದ್ದಾರೆ. ಜ್ಯೋತಿಷಿಗಳ ಸಲಹೆಯಂತೆ ಮದುವೆ ನೆರವೇರಿದೆ. ಸಾಮಾನ್ಯವಾಗಿ ವರ ವಿಷ್ಣುವಿನ ಪ್ರತಿರೂಪ ಎಂದು ವಧುವಿನ ತಂದೆ–ತಾಯಿ, ವರನ ಪಾದ ತೊಳೆದು ಮಂಗಳ ದ್ರವ್ಯಗಳಿಂದ ಪೂಜೆ ಮಾಡುವುದು ಪದ್ಧತಿ. ಇಲ್ಲಿ ಭಿನ್ನ ರೀತಿಯಲ್ಲಿ ಪೂಜೆ ಮಾಡಿ ಹೊಸತನಕ್ಕೆ ದಾರಿ ಮಾಡಿಕೊಟ್ಟಂತಾಗಿದೆ. ಮೈತ್ರಿಯ ತಂದೆ–ತಾಯಿಯನ್ನು ಕೂರಿಸಿ ಅಳಿಯನೇ ಅವರ ಪಾದಗಳನ್ನು ತೊಳೆದು ಪೂಜೆ ಮಾಡಿ ಹಿರಿಯರಿಗೆ ಗೌರವ ತೋರಿಸಿದರು ಎಂದೆನಿಸುತ್ತದೆ. ಹಿರಿಯರಿಗೆ ಗೌರವ ನೀಡುವ ಹೊಸ ಪದ್ಧತಿಯನ್ನು ನೋಡಿ ಖುಷಿಯಾಯಿತು.

—ರಘುನಾಥರಾವ್ ತಾಪ್ಸೆ, ದಾವಣಗೆರೆ

## ಬೋರ್ ಗೌರಿ ಜಾಗದಲ್ಲಿ ಆತ್ಮ!

ಕಥೆಯೇ ಇಲ್ಲದೆ ಸುಮ್ಮನೆ ಎಳೆದಾಡುತ್ತಿದ್ದ ಕಲರ್ಸ್ ಕನ್ನಡದ ‘ಶ್ರೀ ಗೌರಿ’ಯನ್ನು ಮುಗಿಸಿದ್ದಕ್ಕೆ ಸಂತಸವಾಗುತ್ತಿದೆ. ನಿದ್ರೆಯಲ್ಲಿ ನಡೆಯುವ ಕಾಯಿಲೆಯನ್ನು ಇಟ್ಟುಕೊಂಡು ಎರಡು ಕುಟುಂಬಗಳ ಸುತ್ತ ಹೆಣೆದ ಕಥೆಯ ನಿರೂಪಣೆ ಜಾಳಾಗಿತ್ತು. ಅರ್ಥವಿಲ್ಲದ ಸಂಭಾಷಣೆಗಳೇ ಇದ್ದವು.

ನಿದ್ದೆಯಲ್ಲಿ ನಡೆಯುವವರನ್ನು ರಾತ್ರಿ ಸರಪಳಿಯಲ್ಲಿ ಬಂಧಿಸಿಡುವುದನ್ನು ನಾನೆಲ್ಲಿಯೂ ನೋಡಿಲ್ಲ. ಹೆಚ್ಚೆಂದರೆ ಅವರು ಮಲಗುವ ಕೋಣೆಗೆ ಹೊರಗಿನಿಂದ ಚಿಲಕ ಹಾಕಬಹುದು. ಆದರೆ ‘ಶ್ರೀಗೌರಿ’ ಧಾರಾವಾಹಿಯಲ್ಲಿ ಶ್ರೀಗೌರಿಯನ್ನು ಬಂಧಿಸಿರುವಂತೆ ತೋರಿಸಲಾಗಿದೆ. ಆಕೆಗೆ ತಾನೇನು ಮಾಡಬೇಕು ಎನ್ನುವುದರ ಬಗ್ಗೆ ಗಟ್ಟಿ ನಿರ್ಧಾರವೇ ಇರಲಿಲ್ಲ. ಒಟ್ಟಾರೆ ಇದು ಬೋರ್ ಗೌರಿಯಂತೆ ಕಂಡಿದ್ದೇ ಹೆಚ್ಚು. ಆ ಸ್ಥಾನವನ್ನು ಭರ್ತಿ ಮಾಡಿರುವ ‘ನೂರು ಜನ್ಮಕೂ’ ಕೂಡ ಮನೋರಂಜನೆ ನೀಡುವ ಸೂಚನೆ ಇಲ್ಲ. ಇಲ್ಲೂ ಅದೇ ದೆವ್ವ–ಭೂತದ ವಿಷಯ. ಹೆಣ್ಣು ದೆವ್ವವೇ ಇಲ್ಲಿ ವಿಲನ್.

—ಮುರಲೀಧರ ಕುಲಕರ್ಣಿ, ಬೀದರ್

## ಮೊಮ್ಮಗಳಿಂದ ಸತ್ಯದರ್ಶನ

‘ಬಿಗ್ ಬಾಸ್’ ನೋಡುತ್ತಾ ಕುಳಿತಿದ್ದಾಗ ಒಂಬತ್ತು ವರ್ಷದ ನನ್ನ ಮೊಮ್ಮಗಳು ‘ಅಜ್ಜಿ ನೀವು ಯಾಕೆ ಇದನ್ನು ನೋಡುತ್ತಿರುತ್ತೀರಿ’ ಎಂದು ಕೇಳಿದಳು. ಅದಕ್ಕೆ ನಾನು ‘ನೀನು ಕುಕ್ಕೂ ಟೀವಿ ನೋಡುತ್ತೀಯಲ್ಲ ಹಾಗೆ’ ಅಂದೆ. ‘ನಾನು ನೋಡುವ ಚಾನಲ್‌ನಲ್ಲಿ ಕಥೆಗಳಿರುತ್ತವೆ. ಕಡೆಯಲ್ಲಿ moral (ನೀತಿ) ಕೂಡ ಇರುತ್ತದೆ. ಇದರಲ್ಲಿ ಏನಿದೆ? ಯಾವಾಗ ನೋಡಿದರೂ ಜಗಳ, ಕಿರುಚಾಡುವುದು ಇದೆ ತಾನೆ’ ಎಂದಳು. ಅವಳ ಮಾತಿಗೆ ಉತ್ತರ ಕೊಡಲು ಅಸಮರ್ಥಳಾದೆ. ಪುಟ್ಟ ಮಗುವಿಗೆ ಹೊಳೆದ ಸತ್ಯ ನನಗೆ ಹೊಳೆಯಲಿಲ್ಲವಲ್ಲ ಎಂದು ಅನ್ನಿಸಿತು.

—ಪುಷ್ಪಾ ಎನ್.ಕೆ. ರಾವ್, ಉಡುಪಿ

ಕಲರ್ಸ್ ಕನ್ನಡ ವಾಹಿನಿಯ ರಿಯಾಲಿಟಿ ಶೋ ‘ಬಿಗ್ ಬಾಸ್’ ಸ್ಪರ್ಧಿಗಳ ನಾಮಿನೇಷನ್ ಪ್ರಕ್ರಿಯೆ ಒಮ್ಮೊಮ್ಮೆ ಅಸಮಂಜಸ ಎನಿಸುತ್ತದೆ. ‘ಬಿಗ್ ಬಾಸ್’ ಮನೆಯಲ್ಲಿ ಉಳಿದುಕೊಳ್ಳಲು ಅನರ್ಹರಾದ ಸದಸ್ಯರನ್ನು ಆರಿಸಿ, ಸೂಕ್ತ ಕಾರಣಗಳನ್ನು ನೀಡಿ ಆ ಸ್ಪರ್ಧಿಯ ಮುಖಕ್ಕೆ ಚಹಾ ಎರಚುವ ಇಲ್ಲವೇ ಮಸಿ ಹಾಕುವ ಕ್ರಿಯೆ ನಿಜಕ್ಕೂ ಅಸಹನೀಯ ಅನಿಸಿತು. ‘ಆಡೋಣ ಬಾ ಕೆಡಿಸೋಣ ಬಾ’, ‘ತಂದಿಟ್ಟು ತಮಾಷೆ ನೋಡು’ ಎಂಬ ಗಾದೆ ಮಾತುಗಳು ಆ ಮನೆಯ ಟಾಸ್ಕಿನ ವಿಧಾನಕ್ಕೆ ಅನ್ವರ್ಥ ಆಗುತ್ತವೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ರಾಮಾಚಾರಿಗೆ ಕೊನೆ ಎಂದು?

ಟೀವಿ ಪರದೆಯ ಮೇಲೆ ‘ಹೊಸ ಕಥೆ ನಿರೀಕ್ಷಿಸಿ’ ಎಂದು ಬರುವಾಗಲೆಲ್ಲಾ ನಮ್ಮ ಗಮನ ಕಲರ್ಸ್‌ನ ‘ರಾಮಾಚಾರಿ’ ಮೇಲೆ. ಈಗಲಾದರೂ ಮುಗಿಯುತ್ತಿದೆ ಎಂದು ಸಮಾಧಾನ ಮಾಡಿಕೊಳ್ಳುವಷ್ಟರಲ್ಲಿ ‘ಶ್ರೀಗೌರಿ’ಗೆ ಕತ್ತರಿ ಹಾಕಿ ಮುಗಿಸಿಬಿಟ್ಟಿದ್ದಾರೆ. ‘ರಾಮಾಚಾರಿ’ಯನ್ನು ಮಾತ್ರ ಹನುಮಂತನ ಬಾಲದಂತೆ ಎಳೆಯುತ್ತಿದ್ದಾರೆ. ನಾರಾಯಣಾಚಾರ್ಯರ ಇಬ್ಬರು ಸೊಸೆಯಂದಿರನ್ನು ವಿಲನ್ ಮಾಡಿರುವವರಿಗೆ ಚಾರುಲತಾಳನ್ನು ವಿಲನ್ ಮಾಡುವುದು ಕಷ್ಟದ ಕೆಲಸವೇನಲ್ಲ. ಕಥೆ ಮುಗಿಯುತ್ತಿದೆ ಎನ್ನುವಾಗ ಸತ್ಯಭಾಮಾ, ರುಕ್ಮಿಣಿಯ ಪಾತ್ರಗಳು ಸೃಷ್ಟಿಯಾಗಿ ಮುಂದುವರಿದಿದೆ.

—ಎನ್. ಕೃಷ್ಣಮೂರ್ತಿ ರಾವ್